**ಕರ್ನಾಟಕ ಸರ್ಕಾರ**

**ಆರ್ಥಿಕ ಇಲಾಖೆ**

# ಅಧಿಕೃತ ಜ್ಞಾಪನ ಪತ್ರ

ಸಂಖ್ಯೆ : ಆಇ 14 ಬಿಪಿಇ 2010, ಬೆಂಗಳೂರು, ದಿನಾಂಕ: 15ನೇ ಅಕ್ಟೋಬರ್ 2010

**ವಿಷಯ :- 2011-12ನೇ ಸಾಲಿನ ಆಯವ್ಯಯ ಅಂದಾಜುಗಳು**

* * *

2011-12ನೇ ವರ್ಷದ ಆಯವ್ಯಯ ಅಂದಾಜುಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ಈ ಮುಂದಿನ ಸೂಚನೆಗಳನ್ನು ನೀಡಲಾಗಿದೆ.

2. 2011-12ನೇ ವರ್ಷವು 11 ನೇ ಪಂಚವಾರ್ಷಿಕ ಯೋಜನೆಯ ಐದನೇ ವರ್ಷವಾಗಿದೆ.

3. 2011-12ನೇ ವರ್ಷದ ಆಯವ್ಯಯ ಕಾರ್ಯವನ್ನು ನಿಯಂತ್ರಿಸುವ ಸಲುವಾಗಿ ದಿನಾಂಕ ಪಟ್ಟಿಯನ್ನು ಈ ಅಧಿಕೃತ ಜ್ಞಾಪನ ಪತ್ರಕ್ಕೆ ಲಗತ್ತಿಸಲಾಗಿದೆ. ಆರ್ಥಿಕ ಇಲಾಖೆಯಲ್ಲಿನ ಆಯವ್ಯಯ ಕಾರ್ಯವನ್ನು ಸರಿದೂಗಿಸಿಕೊಂಡು ಹೋಗುವ ಉದ್ದೇಶದಿಂದ ಕಾಲಾವಧಿಯನ್ನು ಗೊತ್ತುಪಡಿಸುವುದು ಅವಶ್ಯಕ. ಇದರಿಂದಾಗಿ ಅಂತಿಮ ಹಂತಗಳಲ್ಲಿನ ಕೆಲಸದ ಒತ್ತಡವನ್ನು ತಪ್ಪಿಸಿದಂತಾಗುತ್ತದೆ. ಆಯವ್ಯಯ ಕಾರ್ಯಗಳಿಗೆ **ಮೊದಲ ಆದ್ಯತೆ** ನೀಡಿ, ನಿಗದಿತ ದಿನಾಂಕದ ಅಂತ್ಯವಾಗುವವರೆಗೂ ಕಾಯದೆ, ಸಾಧ್ಯವಾದಷ್ಟು ಬೇಗನೆ, ಅಂದಾಜುಗಳನ್ನು ಕಳುಹಿಸುವ ಹಾಗೆ ನೋಡಿಕೊಳ್ಳುವಂತೆ ಅಂದಾಜು ತಯಾರಿಸುವ ಅಧಿಕಾರಿಗಳಿಗೆ ವಿನಂತಿಸಲಾಗಿದೆ. ಸಚಿವಾಲಯದ ಬಹುತೇಕ ಇಲಾಖೆಗಳಲ್ಲಿ ಆಂತರಿಕ ಆರ್ಥಿಕ ಸಲಹೆಗಾರರನ್ನು ನೇಮಿಸಲಾಗಿದೆ. ಈ ಇಲಾಖೆಗಳಿಗೆ ಸಂಬಂಧಿಸಿದ ಅಂದಾಜುಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸುವ ಸಲುವಾಗಿ ಸಂಬಂಧಪಟ್ಟ ಇಲಾಖೆಗಳ ಆಂತರಿಕ ಆರ್ಥಿಕ ಸಲಹೆಗಾರರಿಗೆ ಕಳುಹಿಸಬಹುದು. ಇತರ ಸಂದರ್ಭಗಳಲ್ಲಿ ಸರ್ಕಾರದ ಉಪ ಕಾರ್ಯದರ್ಶಿ (ಆ ಮತ್ತು ಸಂ.), ಆರ್ಥಿಕ ಇಲಾಖೆ ಇವರ ವಿಳಾಸಕ್ಕೆ ಹೆಸರಿಸಿ ಆರ್ಥಿಕ ಇಲಾಖೆಯ ಆಯವ್ಯಯ ಸಂಕಲನ ಮತ್ತು ಸಮಿತಿ ಶಾಖೆಗೆ ಅಂದಾಜುಗಳನ್ನು ಕಳುಹಿಸುವುದು.

4. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್‌ಗಳಿಗೆ ವರ್ಗಾವಣೆ ಮಾಡಲಾಗುವ ಮೊತ್ತವನ್ನು ಆಯವ್ಯಯದಲ್ಲಿ ಸೇರಿಸಲಾಗಿದ್ದು, ಸಂಬಂಧಪಟ್ಟ ಇಲಾಖಾ ಮುಖ್ಯ ಲೆಕ್ಕ ಶೀರ್ಷಿಕೆಗಳಲ್ಲಿ ಒಳ ಶೀರ್ಷಿಕೆ 196- ಜಿಲ್ಲಾ ಪಂಚಾಯತ್‌ಗಳಿಗೆ ಅನುದಾನ 197-ತಾಲ್ಲೂಕು ಪಂಚಾಯತ್‌ಗಳಿಗೆ ಅನುದಾನ 198-ಗ್ರಾಮ ಪಂಚಾಯತ್‌ಗಳಿಗೆ ಅನುದಾನ ಇತ್ಯಾದಿಗಳ ಅಡಿಯಲ್ಲಿ ತೋರಿಸಲಾಗಿದೆ. ವಿವಿಧ ಮುಖ್ಯ ಲೆಕ್ಕ ಶೀರ್ಷಿಕೆಗಳಲ್ಲಿ ಪ್ರತಿ ಜಿಲ್ಲೆಗಳಿಗೆ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗೆ ಒದಗಿಸಿರುವ ಹಣದ ವಿವರವನ್ನು ವಿಧಾನ ಮಂಡಲಕ್ಕೆ ಮಂಡಿಸಲಾದ ಲಿಂಕ್ ಡಾಕ್ಯುಮೆಂಟ್ ಎಂದು ಕರೆಯಲ್ಪಡುವ ಸಹಾಯಕ ಆಯವ್ಯಯ ಸಂಪುಟಗಳಲ್ಲಿ ತೋರಿಸಲಾಗಿದೆ.

5. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ವಲಯ ಯೋಜನೆಗಳಿಗೆ ಸಂಬಂಧಿಸಿದಂತೆ ಅಂದಾಜು ತಯಾರಿಸುವ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿ, ಸವಿವರ ಆಯವ್ಯಯ ಅಂದಾಜುಗಳನ್ನು ತಯಾರಿಸಿ, ಅದನ್ನು **ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಹಾಗೂ ಸಚಿವಾಲಯದ ಆಂತರಿಕ ಆರ್ಥಿಕ ಸಲಹೆಗಾರರಿಗೆ** ಕಳುಹಿಸಲು ಕೋರಲಾಗಿದೆ. ನಂತರ, ಇಲಾಖಾ ಮುಖ್ಯಸ್ಥರುಗಳು, ಈ ಅಂದಾಜುಗಳನ್ನು ಪರಿಶೀಲಿಸಿ ತಮ್ಮ ಷರಾದೊಂದಿಗೆ, ಸಚಿವಾಲಯದ ಆಂತರಿಕ ಆರ್ಥಿಕ ಸಲಹೆಗಾರರ ಮುಖಾಂತರ ನಿಗದಿಪಡಿಸಿದ ದಿನಾಂಕಗಳ ಮೊದಲೆ ಆರ್ಥಿಕ ಇಲಾಖೆಗೆ ಕಳುಹಿಸಬೇಕೆಂದು ಸೂಚಿಸಲಾಗಿದೆ.

6. ಮಂಜೂರಾತಿಗಳು ಮತ್ತು ವಾಸ್ತವಿಕ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಅಂದಾಜುಗಳನ್ನು ಅತ್ಯಂತ ಜಾಗರೂಕತೆಯಿಂದ ನಿಖರವಾಗಿ ರೂಪಿಸಬೇಕು. ಜಾರಿಯಲ್ಲಿರುವ ಹಲವಾರು ಮಿತವ್ಯಯ ಕ್ರಮಗಳನ್ನು

ದೃಷ್ಟಿಯಲ್ಲಿಟ್ಟುಕೊಂಡು ಇಲಾಖೆಗಳ ಕನಿಷ್ಠ ಅಗತ್ಯತೆಗಳಿಗೆ ವೆಚ್ಚ ಶೀರ್ಷಿಕೆಯಡಿ ಹಣದ ಅವಕಾಶಗಳನ್ನು ಒದಗಿಸಿಕೊಳ್ಳಬೇಕು.

7. ಪರಿಷ್ಕೃತ ಆಯವ್ಯಯದ ರಚನೆ ಮತ್ತು ಲೆಕ್ಕಗಳಲ್ಲಿ ಸಾಮಾನ್ಯವಾದ ಉದ್ದೇಶ ಶೀರ್ಷಿಕೆಗಳನ್ನು ಅನುಬಂಧ-I ರಲ್ಲಿ ನೀಡಲಾಗಿದೆ. ಅನುಬಂಧ-I ರಲ್ಲಿ ತೋರಿಸಿರುವಂತೆ ಯೋಜನೆ ಮತ್ತು ಯೋಜನೇತರಗಳಡಿಯ ಲೆಕ್ಕ ಶೀರ್ಷಿಕೆಗಳಲ್ಲಿ ವೆಚ್ಚದ ಅಂದಾಜುಗಳನ್ನು ಸರಿಯಾಗಿ ತೋರಿಸಬೇಕು ಮತ್ತು ಉಪ-ಶೀರ್ಷಿಕೆ 051-ಸಾಮಾನ್ಯ ವೆಚ್ಚಗಳು ಹಾಗೂ 059-ಇತರೇ ವೆಚ್ಚಗಳಡಿಯಲ್ಲಿನ ವೆಚ್ಚ ಅಂದಾಜುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಮಿತಿಗೊಳಿಸತಕ್ಕದ್ದು. ಯೋಜನೆಗಳಿಗೆ ಒದಗಿಸಲಾಗುವ ವಿವರಗಳನ್ನು ಪರಿಷ್ಕೃತ ಅಂದಾಜುಗಳು ಮತ್ತು ಆಯವ್ಯಯ ಅಂದಾಜುಗಳೆರಡರಲ್ಲಿಯೂ ತೋರಿಸಬೇಕು.

8. 2010ರ ಸೆಪ್ಟೆಂಬರ್ 30ರಂದು ಅಥವಾ ಅದಕ್ಕೂ ಮುಂಚಿತವಾಗಿ ಮಂಜೂರಾದ ಸಿಬ್ಬಂದಿ ವೇತನ ವೆಚ್ಚ ಮತ್ತು ಇತರ ಆವರ್ತಕ ವೆಚ್ಚಗಳ ಮಂಜೂರಾತಿಗಳನ್ನು ಮಾತ್ರ ವೆಚ್ಚದ ಅಂದಾಜುಗಳನ್ನು ರೂಪಿಸುವಲ್ಲಿ ಗಣನೆಗೆ ತೆಗೆದುಕೊಳ್ಳತಕ್ಕದ್ದು. ಆದರೆ ಹೆಚ್ಚಿನ ಮಂಜೂರಾತಿಗಳ ಪಟ್ಟಿಯೊಂದನ್ನು ಆರ್ಥಿಕ ಇಲಾಖೆ : ಆಂತರಿಕ ಆರ್ಥಿಕ ಸಲಹೆಗಾರರಿಗೆ ಆ ದಿನಾಂಕವಾದ ಕೂಡಲೇ 2010ರ ಡಿಸೆಂಬರ್ 31ರಂದು ಇದ್ದಂತೆ ಕಳುಹಿಸಬೇಕು. ಆಯವ್ಯಯ ಅಂದಾಜುಗಳನ್ನು ಸಲ್ಲಿಸಿದ ತರುವಾಯ, ಹೊಸ ಮಂಜೂರಾತಿಗಳ ಬಗ್ಗೆ, ಸಕಾಲದಲ್ಲಿ ಆರ್ಥಿಕ ಇಲಾಖೆಗೆ ಮಾಹಿತಿಯನ್ನು ಒದಗಿಸಿದ ಹೊರತು, ಆಯವ್ಯಯದಲ್ಲಿ ಅದನ್ನು ಸೇರಿಸಲು ಸಾಧ್ಯವಾಗುವುದಿಲ್ಲ.

9.(i) ಅಂದಾಜು ತಯಾರಿಸುವ ಅಧಿಕಾರಿಗಳು ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ಯೋಜನೆಗಳು ಹಾಗೂ ವಿದೇಶಿ ನೆರವಿನಿಂದ ಜಾರಿಗೊಳ್ಳಬೇಕಾದ ಯೋಜನೆಗಳಿಗೆ ಸಂಬಂಧಿಸಿದ ಅಂಕಿಗಳ ಜೊತೆಗೆ ಯೋಜನೇತರ ಆಯವ್ಯಯ ಅಂದಾಜುಗಳಿಗೆ ಸಂಬಂಧಿಸಿದ ಅಂಕಿಗಳನ್ನು ನಮೂದಿಸಿ, ನಿಗದಿಪಡಿಸಿದ ದಿನಾಂಕಗಳೊಳಗೆ ಆರ್ಥಿಕ ಇಲಾಖೆ : ಆಂತರಿಕ ಆರ್ಥಿಕ ಸಲಹೆಗಾರರಿಗೆ ಆಯವ್ಯಯದ ನಮೂನೆಗಳನ್ನು ಕಳುಹಿಸಬೇಕು. ಮುಂದಿನ ವರ್ಷದ ಯೋಜನಾ ಹಂಚಿಕೆಯಾಗುವವರೆಗೂ ಕಾಯದೆ ದಿನಾಂಕ ಪಟ್ಟಿಯಲ್ಲಿ ಸೂಚಿಸಿರುವಂತೆ *"ಯೋಜನೆ ಆಯವ್ಯಯ" ಅಂಕಿಗಳ ಪರಿಷ್ಕೃತ ಅಂದಾಜುಗಳನ್ನು ಒದಗಿಸಬೇಕು. ಯೋಜನಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಸಿಬ್ಬಂದಿ ವಿವರವನ್ನು ಲೆಕ್ಕ ಹಾಕಿ, ಅದನ್ನು ಪರಿಶಿಷ್ಟ 'ಬಿ' ನಲ್ಲಿ* ಸೇರಿಸುವಂತೆ ಆಂತರಿಕ ಆರ್ಥಿಕ ಸಲಹೆಗಾರರ ಮೂಲಕ ಆರ್ಥಿಕ ಇಲಾಖೆಗೆ ಕಳುಹಿಸಬೇಕು. ಮಂಜೂರಾದ ಹುದ್ದೆಗಳಿಗೆ ಮಾತ್ರ ಆಯವ್ಯಯ ಅವಕಾಶಗಳನ್ನು ಮಾಡಿಕೊಳ್ಳುವುದು ಎಂದರೆ, ಅನುಬಂಧ-ಬಿ ಅಂದಾಜಿನಲ್ಲಿ ತೋರಿಸಿರುವ ಹುದ್ದೆಗಳಿಗೆ ಮಾತ್ರ.

(ii) ತಾತ್ಕಾಲಿಕ ಯೋಜನಾ ಹಂಚಿಕೆಗಳನ್ನು ಯೋಜನಾ ಇಲಾಖೆಯು ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸಿದ್ದರೆ ಆ ಇಲಾಖೆಗಳು ಅವುಗಳನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ತಾತ್ಕಾಲಿಕ ಹಂಚಿಕೆಯನ್ನು ಆಧರಿಸಿದ 2011-2012ರ ಆಯವ್ಯಯ ಅಂದಾಜುಗಳನ್ನು ಆರ್ಥಿಕ ಇಲಾಖೆಗೆ ಕಳುಹಿಸತಕ್ಕದು.

(iii) ಯೋಜನಾ ಆಯೋಗದೊಂದಿಗೆ ಚರ್ಚೆ ನಡೆಸಿದ ತರುವಾಯ ಅಂತಿಮ ಯೋಜನಾ ಗರಿಷ್ಠ ಪರಿಮಿತಿಗಳನ್ನು ಯೋಜನಾ ಇಲಾಖೆಯು ತಿಳಿಸಿದ ಕೂಡಲೇ ಅಂತಿಮ ಯೋಜನಾ ಅಂದಾಜುಗಳನ್ನು ಕಳುಹಿಸಬೇಕು.

10. ನಿಗದಿತ ನಮೂನೆಗಳಲ್ಲಿ ಎಲ್ಲಾ ವಿವರಗಳನ್ನೊಳಗೊಂಡಂತೆ ಒಂದೇ ಪ್ರತಿಯಲ್ಲಿ ಕ್ರೋಢೀಕೃತ ಅಂದಾಜುಗಳನ್ನು ತಯಾರಿಸಿ ಆರ್ಥಿಕ ಇಲಾಖೆಗೆ ಕಳುಹಿಸಿಕೊಡಬೇಕೆಂದು ಎಲ್ಲಾ ಆಯವ್ಯಯ ಅಂದಾಜು ತಯಾರಿಸುವ ಅಧಿಕಾರಿಗಳನ್ನು ಕೋರಲಾಗಿದೆ. ಸಾಕಷ್ಟು ಮುಂಚಿತವಾಗಿಯೇ ತಮ್ಮ ಅಧೀನ ಅಧಿಕಾರಿಗಳಿಂದ ಮಾಹಿತಿ ಪಡೆಯಲು ವಿಶೇಷ ವ್ಯವಸ್ಥೆಗಳನ್ನು ಮಾಡಿಕೊಳ್ಳಬಹುದಾಗಿದೆ. ತಮ್ಮ ಅಧೀನ ಅಧಿಕಾರಿಗಳಿಂದ ಸ್ವೀಕರಿಸಿರುವ

ಅಂದಾಜುಗಳ ಕ್ರೋಢೀಕರಣ ಕಾರ್ಯವು ಸಂಬಂಧಿಸಿದ ಮುಖ್ಯ ನಿಯಂತ್ರಣಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳ ಜವಾಬ್ದಾರಿಯಾಗಿದ್ದು, ಅವರುಗಳು ಯಾವುದೇ ಬಾಬ್ತು ಬಿಟ್ಟುಹೋಗದಂತೆ ನಿಗಾ ವಹಿಸತಕ್ಕದ್ದು.

11. ಪ್ರಸ್ತುತ ಆಯವ್ಯಯದಲ್ಲಿ ಪ್ರತಿಯೊಂದು ಕಾರ್ಯಯೋಜನೆ / ಉದ್ದೇಶ ಶೀರ್ಷಿಕೆ ಎಷ್ಟೇ ಮೊತ್ತವನ್ನು ಒಳಗೊಂಡಿದ್ದರೂ ಒಂದು ಧನವಿನಿಯೋಗ ಘಟಕವೆಂದು ಪರಿಗಣಿಸಲಾಗಿದೆ. ಇದರಿಂದಾಗಿ 0.10 ಲಕ್ಷ ರೂ. ನಿಂದ 1.00 ಕೋಟಿ ರೂ.ಗಳವರೆಗಿನ ಅಂತರದಲ್ಲಿ ಪ್ರತಿಯೊಂದು ಮುಖ್ಯ ಲೆಕ್ಕಶೀರ್ಷಿಕೆಯಡಿಯಲ್ಲಿ ಬಹಳಷ್ಟು ಯೋಜನೆಗಳಿಗೆ ಎಡೆಮಾಡಿಕೊಟ್ಟಿದೆ. 2010–11ನೇ ಸಾಲಿನ ಆಯವ್ಯಯ ದಸ್ತಾವೇಜುಗಳ ಅವಲೋಕನೆಯಿಂದ 1.00 ಕೋಟಿ ರೂ.ಗಳಿಗಿಂತ ಕಡಿಮೆ ಮೊತ್ತವನ್ನೊಳಗೊಂಡಿರುವ 375 ಯೋಜನೇತರ ಮತ್ತು 343 ಯೋಜನೆಗೆ ಸಂಬಂಧಿಸಿದ ಕಾರ್ಯಯೋಜನೆಗಳಿರುತ್ತವೆ. ಪೂರಕ ಅಂದಾಜುಗಳಲ್ಲಿ ಹೆಚ್ಚುವರಿ ಅನುದಾನ ಒದಗಿಸುವುದನ್ನು ಮತ್ತು ಮರು ವಿನಿಯೋಗವನ್ನು ತಪ್ಪಿಸುವುದಕ್ಕಾಗಿ ಆಯವ್ಯಯದಲ್ಲಿ ಅನೇಕ ಉದ್ದೇಶ ಶೀರ್ಷಿಕೆಗಳನ್ನು ಮೊಟಕುಗೊಳಿಸಲು ಸರ್ಕಾರವು ನಿರ್ಧರಿಸಿದೆ.

**12. ಎಲ್ಲಾ ಆಯವ್ಯಯ ಅಂದಾಜು ತಯಾರಿಸುವ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಯಯೋಜನೆಗಳನ್ನು ಪುನರಾವಲೋಕಿಸಬೇಕೆಂದು ಮತ್ತು ಸಮಾನ ಉದ್ದೇಶವನ್ನು ಹೊಂದಿರುವ ಅಥವಾ ಹೆಚ್ಚಿನ ಹೊಂದಾಣಿಕೆಯಿರುವ ಉದ್ದೇಶಗಳನ್ನು ಹೊಂದಿರುವ ರಾಜ್ಯ ಯೋಜನೆ ಮತ್ತು ಯೋಜನೇತರ ಕಾರ್ಯಯೋಜನೆಗಳನ್ನು (Schemes) ಒಂದೇ ಕಾರ್ಯಯೋಜನೆಯಾಗಿ ವಿಲೀನಗೊಳಿಸಲು ಅಗತ್ಯ ಕ್ರಮವನ್ನು ಕೈಗೊಳ್ಳತಕ್ಕದ್ದು. ಸಾಮಾನ್ಯವಾಗಿ 1.00 ಕೋಟಿ ರೂ.ಗಳಿಗಿಂತ ಕಡಿಮೆ ಮೊತ್ತವನ್ನೊಳಗೊಂಡಿರುವ ಉದ್ದೇಶ ಶೀರ್ಷಿಕೆಯನ್ನು 2011–12ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಸೇರಿಸಲಾಗುವುದಿಲ್ಲ.**

13. ಆದರೆ ಭಾರತ ಸರ್ಕಾರವು ಹೊರಡಿಸಿರುವ ಕಾರ್ಯಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳ ಆಧಾರದ ಮೇಲೆ 1.00 ಕೋಟಿ ರೂ.ಗಳಿಗಿಂತ ಕಡಿಮೆ ಮೊತ್ತವನ್ನು ಹೊಂದಿದ್ದಾಗ್ಯೂ ಕೂಡ, ಕೇಂದ್ರ ಪುರಸ್ಕೃತ ಯೋಜನೆ ಮತ್ತು ಕೇಂದ್ರ ಯೋಜನೆಗಳನ್ನು ಪ್ರತ್ಯೇಕವಾಗಿ ತೋರಿಸತಕ್ಕದ್ದು.

14. **ನಿಗದಿಪಡಿಸಿದ ದಿನಾಂಕಗಳ ತರುವಾಯ ಬಂದ ಅಂದಾಜುಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ತಡವಾಗಿ ಬಂದಂಥ ಪ್ರಸ್ತಾಪಗಳು ಲೋಪವಾಗುವುದಕ್ಕೆ ಇಲಾಖೆಗಳು ಹಾಗೂ ಜಿಲ್ಲಾ ಪಂಚಾಯತ್‌ಗಳು ಜವಾಬ್ದಾರಿಯಾಗುತ್ತವೆ. ಹೀಗೆ ಪದೇ ಪದೇ ಸೂಚನೆಗಳನ್ನು ನೀಡುತ್ತಿದ್ದಾಗ್ಯೂ, ಇಲಾಖೆಗಳು ನಿಗದಿಪಡಿಸಿದ ದಿನಾಂಕಗಳನ್ನು ಅನುಸರಿಸುತ್ತಿಲ್ಲ. ವೇಳಾ ಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವ ಅಗತ್ಯತೆಯ ಬಗ್ಗೆ ಎಲ್ಲ ಅಂದಾಜು ತಯಾರಿಸುವ ಅಧಿಕಾರಿಗಳ ಗಮನವನ್ನು ಸೆಳೆಯಲಾಗಿದೆ.**

15. ಲೋಕೋಪಯೋಗಿ ಕಾಮಗಾರಿಗಳ ಅಂದಾಜುಗಳನ್ನು ಗೊತ್ತುಪಡಿಸಿದ ದಿನಾಂಕದೊಳಗೆ ಆರ್ಥಿಕ ಇಲಾಖೆಗೆ ಕಳುಹಿಸಿಕೊಡುವ ಕ್ರಮವನ್ನು ಕೈಗೊಳ್ಳಬೇಕೆಂದು ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರುಗಳು ಹಾಗೂ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಕೋರಲಾಗಿದೆ. ಅಂದಾಜುಗಳನ್ನು ತಯಾರಿಸಲು ಮತ್ತು ಒಟ್ಟುಗೂಡಿಸಲು ಅವಶ್ಯಕ ಮಾಹಿತಿಗಳನ್ನು ಒದಗಿಸಲು ಮುಖ್ಯ ಅಬಿಯಂತರುಗಳು ತಮ್ಮ ನಿಯಂತ್ರಣದಲ್ಲಿರುವ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡತಕ್ಕದ್ದು. ಈ ಅಂದಾಜುಗಳನ್ನು ಸ್ವೀಕರಿಸುವಲ್ಲಿ ಯಾವಾಗಲೂ ವಿಳಂಬವುಂಟಾಗಿ ಅವುಗಳ ಸಮರ್ಪಕ ಪರಿಶೀಲನೆಗೆ ಅಲ್ಪ ಸಮಯ ಉಳಿಯುತ್ತಿದೆ. ಆದುದರಿಂದ, ನಿಗದಿಪಡಿಸಿದ ದಿನಾಂಕದೊಳಗೇ ಅಂದಾಜುಗಳನ್ನು ಕಟ್ಟುನಿಟ್ಟಾಗಿ ರವಾನಿಸುವ ಏರ್ಪಾಡನ್ನು ಮಾಡಬೇಕು. ಕಾಮಗಾರಿಗಳ ವಿವರಗಳನ್ನು ನೀಡುವಾಗ, ಅದು ಆಡಳಿತಾತ್ಮಕ ಮಂಜೂರಾಗಿದೆಯೇ,

ಅದು ಪ್ರಗತಿಯಲ್ಲಿದೆಯೇ ಅಥವಾ ಪ್ರಾರಂಭವಾಗ ಬೇಕಾಗಿದೆಯೇ ಮತ್ತು ಹಿಂದಿನ ವರ್ಷದ ಆಯವ್ಯಯಗಳಲ್ಲಿ ಸೇರಿಸಿರುವ ಕಾಮಗಾರಿ ಮುಕ್ತಾಯವಾಗಿದೆಯೇ ಎಂಬ ಬಗ್ಗೆ ಮಾಹಿತಿಯನ್ನು ನೀಡಬೇಕು.

16. ಎಲ್ಲಾ ಕಟ್ಟಡಗಳಿಗೆ ಯೋಜನೆಯ ಅಡಿಯಲ್ಲಿ ಮಾತ್ರ ಹಣದ ಏರ್ಪಾಡು ಮಾಡಬೇಕು. ಸಂಬಂಧಪಟ್ಟ ಇಲಾಖೆಗಳು ತಮ್ಮ ಇಲಾಖೆಗಳ ಕಟ್ಟಡಗಳಿಗೆ ಆಯವ್ಯಯ ಅಂದಾಜುಗಳನ್ನು ರೂಪಿಸುವಾಗ, ಈಗಾಗಲೇ ನಿರ್ಮಾಣ ಕೈಗೊಂಡ ಕಟ್ಟಡಗಳು ಮತ್ತು ನಿರ್ಮಿತವಾಗುತ್ತಿರುವ ಕಟ್ಟಡಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಮತ್ತು ನಿರ್ಮಾಣದ ಹಂತದಲ್ಲಿರುವ ಕಟ್ಟಡಗಳಿಗೆ ಸಾಕಷ್ಟು ಮೊತ್ತವನ್ನು ಮಂಜೂರು ಮಾಡಿದ ನಂತರವೇ ಹೊಸ ಕಾಮಗಾರಿಗಳಿಗೆ ಒದಗಿಸಬೇಕು. ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡಗಳು) ಉತ್ತರ ಮತ್ತು ದಕ್ಷಿಣ ವಲಯ ಇವರುಗಳು ಸಾಕಷ್ಟು ಮುಂಚಿತವಾಗಿ ಯೋಜನಾ ಹಂಚಿಕೆಯಿಂದ ಅಗತ್ಯವಾದ ಸಾಕಷ್ಟು ನಿಧಿಯನ್ನು ಒದಗಿಸಲು ಅನುಕೂಲವಾಗುವಂತೆ ಸಂಬಂಧಿತ ಇಲಾಖಾ ಮುಖ್ಯಸ್ಥರುಗಳಿಗೆ ಪರಿಷ್ಕೃತ ಅಂದಾಜುಗಳೊಂದಿಗೆ ಪ್ರಗತಿಯಲ್ಲಿರುವ ಕಾಮಗಾರಿಗಳ ಪಟ್ಟಿಯೊಂದನ್ನು ಮತ್ತು ಚಾಲ್ತಿಯ ವರ್ಷಕ್ಕೆ ಅಗತ್ಯವಿರುವ ಮೊತ್ತ ಮತ್ತು ಮುಂದಿನ ವರ್ಷಕ್ಕೆ ಅಗತ್ಯವಿರುವ ಮೊತ್ತ ಇವುಗಳ ವಿವರಗಳನ್ನು ಒದಗಿಸಬೇಕು. ಇಲಾಖಾ ಮುಖ್ಯಸ್ಥರುಗಳು, ತಮ್ಮ ಯೋಜನಾ ಹಂಚಿಕೆಯಿಂದ ಸಾಕಷ್ಟು ಹಣವನ್ನು ಇದಕ್ಕಾಗಿ ಒದಗಿಸಿಕೊಳ್ಳಲು ಜವಾಬ್ದಾರರಾಗಿರುತ್ತಾರೆ. ಈ ರೀತಿ ತಯಾರಿಸಿದ ಕಾಮಗಾರಿಗಳ ಪಟ್ಟಿ ಮತ್ತು ಅಂದಾಜುಗಳನ್ನು ಆರ್ಥಿಕ ಇಲಾಖೆಗೆ ನೇರವಾಗಿ ಕಳುಹಿಸತಕ್ಕದ್ದು. ಈ ಕಾಮಗಾರಿಗಳು 3-4 ವರ್ಷಗಳಲ್ಲಿ ಮುಕ್ತಾಯವಾಗುವಂತೆ ಸಾಕಷ್ಟು ಅನುದಾನವನ್ನು ಆಯವ್ಯಯದಲ್ಲಿ ಒದಗಿಸತಕ್ಕದ್ದು. ಯಾವುದೇ ಸಾಂಕೇತಿಕ ಏರ್ಪಾಡಿಗೆ ಅನುಮತಿಸಲಾಗುವುದಿಲ್ಲ. ಹೊಸ ಕಾಮಗಾರಿಗಳ ಸೇರ್ಪಡೆಗಾಗಿ ಗೊತ್ತುಪಡಿಸಿದ ದಿನಾಂಕದೊಳಗೆ ಪ್ರಸ್ತಾವನೆಯನ್ನು ಕಳುಹಿಸಬೇಕು ಮತ್ತು ಆ ಸೇರ್ಪಡೆಯನ್ನು ಆಯವ್ಯಯ ಪೂರ್ವ ಪರಿಶೀಲನೆಗೊಳಪಟ್ಟು ಮಾಡಲಾಗುವುದು. ಜಿಲ್ಲಾ ಪಂಚಾಯತ್‌ಗಳ ನಿಯಂತ್ರಣದಲ್ಲಿರುವ ಕಾಮಗಾರಿಗಳ ಬಗ್ಗೆ ಜಿಲ್ಲಾ ಪಂಚಾಯತ್‌ಗಳು ಮೇಲೆ ಹೇಳಿದಂತೆ ಕ್ರಮ ಕೈಗೊಳ್ಳಬೇಕು.

17. ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರು ಎಲ್ಲಾ ಆಯವ್ಯಯ ಕಾರ್ಯಗಳು ತುರ್ತು ಎಂದು ಪರಿಗಣಿಸಿ, ಮುದ್ರಣಾಲಯದಲ್ಲಿ ಯಾವುದೇ ಹಂತದಲ್ಲಿ ವಿಳಂಬವಾಗದಂತೆ ನೋಡಿಕೊಳ್ಳಬೇಕು ಮತ್ತು ಅಗತ್ಯವಾದರೆ ವಿಶೇಷ ಏರ್ಪಾಡುಗಳನ್ನು ಮಾಡುವುದರ ಮೂಲಕ ಆಯವ್ಯಯ ಕಾರ್ಯಕ್ಕೆ **ಮೊದಲ ಆದ್ಯತೆ** ನೀಡಬೇಕು.

18. ನಿಗದಿತ ದಿನಾಂಕಗಳನ್ನು ಪಾಲಿಸದಿದ್ದಲ್ಲಿ ನಿಗದಿತ ಸಮಯಕ್ಕೆ ಆಯವ್ಯಯವನ್ನು ಮಂಡಿಸಲು ಆರ್ಥಿಕ ಇಲಾಖೆಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಅಧಿಕೃತ ಜ್ಞಾಪನ ಪತ್ರದಲ್ಲಿ ಸೂಚಿಸಿರುವ ದಿನಾಂಕಗಳ ಬಗ್ಗೆ ಎಚ್ಚರವಹಿಸತಕ್ಕದ್ದು. ಮತ್ತು ಆಯವ್ಯಯ ಅಂದಾಜುಗಳನ್ನು ವಿಶೇಷ ಓಲೆಕಾರರ ಮೂಲಕ ಕಳುಹಿಸಿಕೊಡುವುದು. ನಿಗದಿತ ದಿನಾಂಕಗಳ ಒಳಗೆ ಅಂದಾಜುಗಳು ತಲುಪದಿದ್ದಲ್ಲಿ, ಕಳೆದ ವರ್ಷದಲ್ಲಿ ಒದಗಿಸಿರುವ ಅಂದಾಜಿನ ಮೇಲೆ ಆಯವ್ಯಯವನ್ನು ಆರ್ಥಿಕ ಇಲಾಖೆಯೇ ಅಂತಿಮಗೊಳಿಸಬೇಕಾಗುತ್ತದೆ ಮತ್ತು ಆಯವ್ಯಯದಲ್ಲಾಗಬಹುದಾದ ಕಡಿತವನ್ನು ಒದಗಿಸಲು ಅಧಿಕ ಮೊತ್ತದ ಪ್ರಸ್ತಾವನೆಯನ್ನು 2011-12ರ ಆರ್ಥಿಕ ವರ್ಷದ ಅವಧಿಯಲ್ಲಿ ಪರಿಗಣಿಸುವುದಿಲ್ಲ.

19. ಪರಿಶಿಷ್ಟ "ಬಿ" ಅಂದಾಜುಗಳು, ರಾಜಸ್ವ ಮತ್ತು ವೆಚ್ಚ ಅಂದಾಜುಗಳನ್ನು ತಯಾರಿಸುವ ಬಗ್ಗೆ ವಿವರವಾದ ಪ್ರತ್ಯೇಕ ಸೂಚನೆಗಳನ್ನು ವಾಡಿಕೆಯಂತೆ ನೀಡಲಾಗುವುದು. ಈ ಮಧ್ಯೆ, ಇಲಾಖಾ ಮುಖ್ಯಸ್ಥರುಗಳು, ಜಿಲ್ಲಾಧಿಕಾರಿಗಳು ಮತ್ತು ಇತರ ಅಂದಾಜು ತಯಾರಿಸುವ ಅಧಿಕಾರಿಗಳು, ಈ ಅಂದಾಜುಗಳನ್ನು ಸಿದ್ಧಪಡಿಸಿಕೊಳ್ಳುವ ಬಗ್ಗೆ ಅಗತ್ಯ ಏರ್ಪಾಡು ಮಾಡಿಕೊಳ್ಳತಕ್ಕದ್ದು.

20. ನಿವೃತ್ತಿ ವಯೋಮಿತಿಯನ್ನು ಹೊಂದಿದ ಅಧಿಕಾರಿಗಳ : ಸಿಬ್ಬಂದಿಯವರ ಅಂತಿಮ ರಜಾ ಸೌಲಭ್ಯಗಳನ್ನು ಆಯಾ ಇಲಾಖೆಗಳ ಕಾರ್ಯನಿರತ ಪ್ರಧಾನ ಶೀರ್ಷಿಕೆ ಅಡಿಯಲ್ಲಿ ಒದಗಿಸಲಾಗುತ್ತಿದ್ದು "2071-ವಿಶ್ರಾಂತಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು" ಎಂಬ ಏಕ ಪ್ರಧಾನ ಶೀರ್ಷಿಕೆಯಡಿ ಅಂತಿಮ ರಜಾ ಸೌಲಭ್ಯಗಳಿಗೆ ಲೆಕ್ಕವನ್ನಿಡಲು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರವರು ತಿದ್ದುಪಡಿ ಚೀಟಿಯನ್ನು ನೀಡಿರುತ್ತಾರೆ. ಆದ್ದರಿಂದ, ಇಲಾಖಾ ಮುಖ್ಯಸ್ಥರುಗಳು ಮತ್ತು ಅಂದಾಜು ತಯಾರಿಕಾ ಅಧಿಕಾರಿಗಳು 2011-12ನೇ ಆರ್ಥಿಕ ವರ್ಷದಲ್ಲಿ ನಿವೃತ್ತಿ ಹೊಂದಲಿರುವ ಅಧಿಕಾರಿಗಳ ಮತ್ತು ಸಿಬ್ಬಂದಿಯ ಪಟ್ಟಿಯ ಜೊತೆಗೆ ಅವರ ಮೂಲ ವೇತನ, ತುಟ್ಟಿ ಭತ್ಯೆ, ಮತ್ತು ಅವರ ಅಂತಿಮ ರಜಾ ಸೌಲಭ್ಯದ ಅಂದಾಜನ್ನು ತಯಾರಿಸಿ ಒದಗಿಸಬೇಕು. ಈ ವಿವರಗಳನ್ನು ಅನುಬಂಧ - II ರಲ್ಲಿ ಒದಗಿಸಬೇಕು. ಸ್ವಇಚ್ಛಾ ನಿವೃತ್ತಿ, ರಾಜೀನಾಮೆ ಮತ್ತು ಮರಣ ಪ್ರಕರಣಗಳಿಗೆ ಸಂಬಂಧಿಸಿದ ಅಂತಿಮ ರಜೆ ಸೌಲಭ್ಯಗಳನ್ನು ಕಳೆದ ಮೂರು ವರ್ಷಗಳ ಸರಾಸರಿ ವೆಚ್ಚಗಳ ಆಧಾರದ ಮೇಲೆ ಅಂದಾಜು ಮಾಡತಕ್ಕದ್ದು.

21. ಈ ಅಧಿಕೃತ ಜ್ಞಾಪನ ಪತ್ರವನ್ನು ಆರ್ಥಿಕ ಇಲಾಖೆಯ ವೆಬ್‌ಸೈಟ್ www.kar.nic.in/finance ನಿಂದ ಪಡೆಯಬಹುದು.

**(ಎಲ್.ವಿ. ನಾಗಾರಾಜನ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರ್ಥಿಕ ಇಲಾಖೆ.

ಇವರಿಗೆ,

ಮಹಾಲೇಖಪಾಲರು, (ಲೆಕ್ಕಗಳು ಮತ್ತು ಹಕ್ಕುಗಳು) ಕರ್ನಾಟಕ, ಬೆಂಗಳೂರು.
ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು,
ಅಪರ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು,
ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಅಧೀನ ಕಾರ್ಯದರ್ಶಿಗಳು.
ಯೋಜನಾ ಇಲಾಖೆಯ ಎಲ್ಲಾ ಕ್ರಿಯಾ ಘಟಕಗಳ ನಿರ್ದೇಶಕರುಗಳು.
ಆರ್ಥಿಕ ಇಲಾಖೆಯ ಎಲ್ಲಾ ಆಯವ್ಯಯ ತಯಾರಿಸುವ ಶಾಖೆಗಳು.
ವಿಶೇಷಾಧಿಕಾರಿಗಳು, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ) ಮತ್ತು ಆರ್ಥಿಕ ಇಲಾಖೆ (ಜಿಲ್ಲಾ ಪಂಚಾಯತ್)
ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು.
ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
ಎಲ್ಲಾ ಜಿಲ್ಲಾಧಿಕಾರಿಗಳು.
ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಮತ್ತು ಇತರ ಅಂದಾಜು ತಯಾರಿಸುವ ಅಧಿಕಾರಿಗಳು,
ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆಯ ಎಲ್ಲಾ ಮುಖ್ಯ ಅಭಿಯಂತರರುಗಳು.
ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು,
ವಾರದ ರಾಜ್ಯಪತ್ರ..
ಹೆಚ್ಚುವರಿ ಪ್ರತಿಗಳು.

## 2011-12 ನೇ ಆಯವ್ಯಯ ಕಾರ್ಯಕ್ರಮವನ್ನು ನಿಯಂತ್ರಿಸುವ ದಿನಾಂಕ ಪಟ್ಟಿ

### ಆಯವ್ಯಯ ಕಾರ್ಯಕ್ರಮ

### I ಆರ್ಥಿಕ ಇಲಾಖೆಯು ಕಳುಹಿಸುವ ಆಯವ್ಯಯ ಸೂಚನೆಗಳು

| | | ಇವರಿಗೆ | ದಿನಾಂಕ |
|---|---|---|---|
| i) | ಪರಿಶಿಷ್ಟ 'ಬಿ' ಅಂದಾಜುಗಳ ಬಗ್ಗೆ ಸೂಚನೆಗಳು | ಎಲ್ಲಾ ಅಂದಾಜು ತಯಾರಿಸುವ ಅಧಿಕಾರಿಗಳು | 8ನೇ ನವೆಂಬರ್ 2010 |
| ii) | ರಾಜಸ್ವ ಅಂದಾಜುಗಳನ್ನು ಸಿದ್ಧಪಡಿಸುವ ಬಗ್ಗೆ ಸೂಚನೆಗಳು | ಸಂಬಂಧಪಟ್ಟ ಅಂದಾಜು ತಯಾರಿಸುವ ಅಧಿಕಾರಿಗಳು | 8ನೇ ನವೆಂಬರ್ 2010 |
| iii) | ವೆಚ್ಚದ ಅಂದಾಜುಗಳನ್ನು ಸಿದ್ಧಪಡಿಸುವ ಬಗ್ಗೆ ಸೂಚನೆಗಳು | ಸಂಬಂಧಪಟ್ಟ ಅಂದಾಜು ತಯಾರಿಸುವ ಅಧಿಕಾರಿಗಳು | 9ನೇ ನವೆಂಬರ್ 2010 |

### II ಮಹಾಲೇಖಪಾಲರಿಂದ ಕಳೆದ ಸಾಲಿನ ವಾಸ್ತವಿಕಗಳ ಸ್ವೀಕೃತಿ

| | | | |
|---|---|---|---|
| i) | ರಾಜಸ್ವ ಸ್ವೀಕೃತಿಗಳು, ರಾಜಸ್ವ ವೆಚ್ಚ, ಬಂಡವಾಳ ಮತ್ತು ಸಾರ್ವಜನಿಕ ಲೆಕ್ಕಗಳ ಮೇರೆಗೆ 2009-10ರ ವರ್ಷಕ್ಕಾಗಿ ವಾಸ್ತವಿಕಗಳು | ಮಹಾಲೇಖಪಾಲರು, (ಲೆಕ್ಕಪತ್ರಗಳು ಮತ್ತು ಹಕ್ಕುಗಳು) ಕರ್ನಾಟಕ, ಬೆಂಗಳೂರು. | 20ನೇ ಅಕ್ಟೋಬರ್ 2010 |
| ii) | ಸ್ವೀಕೃತಿ ಶೀರ್ಷಿಕೆಗಳ ಮೇರೆಗೆ 2010-11ರ ಸಾಲಿನ ಮೊದಲ ಆರು ತಿಂಗಳುಗಳಿಗಾಗಿ ವಾಸ್ತವಿಕಗಳು | - ಅದೇ- | 10ನೇ ನವೆಂಬರ್ 2010 |
| iii) | ವೆಚ್ಚದ ಶೀರ್ಷಿಕೆಗಳ ಮೇರೆಗೆ 2010-11ನೇ ಸಾಲಿನ ಮೊದಲ ಆರು ತಿಂಗಳುಗಳಿಗಾಗಿ ವಾಸ್ತವಿಕಗಳು | - ಅದೇ - | 10ನೇ ನವೆಂಬರ್ 2010 |

### III ಆರ್ಥಿಕ ಇಲಾಖೆಯಲ್ಲಿ ಈ ಕೆಳಗಿನ ಆಯವ್ಯಯ ಅಂದಾಜುಗಳ ಸ್ವೀಕೃತಿ

| | | |
|---|---|---|
| i) | ಪರಿಶಿಷ್ಟ 'ಬಿ' ಅಂದಾಜುಗಳು ಅಂದರೆ ವೇತನ ಅಂದಾಜುಗಳ ವಿವರಗಳು (ಯೋಜನೆ ಮತ್ತು ಯೋಜನೇತರ) | 18ನೇ ನವೆಂಬರ್ 2010 |
| ii) | ಇಲಾಖೆಗಳು ಸಿದ್ಧಪಡಿಸಿದ ರಾಜಸ್ವ ಅಂದಾಜುಗಳು | 20ನೇ ನವೆಂಬರ್ 2010 |
| iii) | ಸಂಬಂಧಪಟ್ಟ ಇಲಾಖೆಗಳು, ಯಥೋಚಿತವಾಗಿ ಭರ್ತಿ ಮಾಡಲ್ಪಟ್ಟ ಪರಿಶಿಷ್ಟಗಳು ಪರಿಶಿಷ್ಟ 'ಇ' (ಯೋಜನೇತರ) ಪರಿಶಿಷ್ಟ 'ಸಿ' 'ಡಿ' 'ಜಿ' 'ಹೆಚ್' 'ಐ' 'ಜೆ' | 23ನೇ ನವೆಂಬರ್ 2010 |
| iv) | ಮಹಾಲೇಖಪಾಲರು ಸಿದ್ಧಪಡಿಸಿದ ಅಂದಾಜುಗಳು | 23ನೇ ನವೆಂಬರ್ 2010 |
| v) | ಇಲಾಖೆಗಳು ಸಿದ್ಧಪಡಿಸಿದ ಯೋಜನೇತರ ವೆಚ್ಚದ ಅಂದಾಜುಗಳು, ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆಗಳು ಮತ್ತು ವಿದೇಶಿ ನೆರವಿನ ಯೋಜನೆಗಳು ಇತ್ಯಾದಿಗಳು | 30ನೇ ನವೆಂಬರ್ 2010 |

## IV ರಾಜ್ಯ ಯೋಜನಾ ಕಾರ್ಯಕ್ರಮಗಳು

| | | |
|---|---|---|
| i) | ಆರ್ಥಿಕ ಇಲಾಖೆಯಲ್ಲಿ 2010-11ರ ಪರಿಷ್ಕೃತ ರಾಜ್ಯ ಯೋಜನಾ ಅಂದಾಜುಗಳ ಸ್ವೀಕೃತಿ | 29ನೇ ನವೆಂಬರ್ 2010 |
| ii) | ಆರ್ಥಿಕ ಇಲಾಖೆಯಲ್ಲಿ 2011-12ನೇ ವರ್ಷದ ತಾತ್ಕಾಲಿಕ ರಾಜ್ಯ ಯೋಜನಾ ಅಂದಾಜುಗಳ ಸ್ವೀಕೃತಿ | ಯೋಜನಾ ಇಲಾಖೆಯು ತಾತ್ಕಾಲಿಕ ರಾಜ್ಯ ಯೋಜನಾ ಹಂಚಿಕೆಯನ್ನು ತಿಳಿಸಿದ 10 ದಿನಗಳೊಳಗಾಗಿ |
| iii) | ಜಿಲ್ಲಾ ಪಂಚಾಯತ್‌ಗಳು, ಇಲಾಖೆಗಳ ಮುಖ್ಯಸ್ಥರುಗಳು ಮತ್ತು ಸಂಬಂಧಿಸಿದ ಆಡಳಿತ ಸಚಿವಾಲಯದೊಂದಿಗೆ ಸಮಾಲೋಚಿಸಿ ಯೋಜನಾ ಇಲಾಖೆಯು 2011-12ನೇ ವರ್ಷಕ್ಕಾಗಿ ರಾಜ್ಯ ಯೋಜನಾ ಕಾರ್ಯಕ್ರಮ ತಯಾರಿಸುವುದು | ಯೋಜನಾ ಇಲಾಖೆ ಯೋಜನೆಯ ಗರಿಷ್ಠ ಪರಿಮಿತಿಯನ್ನು ತಿಳಿಸಿದ ಕೂಡಲೇ |
| iv) | ಜಿಲ್ಲಾ ಪಂಚಾಯತ್‌ಗಳೂ ಸೇರಿದಂತೆ ಅಂದಾಜು ತಯಾರಿಸುವ ಅಧಿಕಾರಿಗಳಿಂದ ಯೋಜನಾ ಅಂತಿಮ ಅಂದಾಜುಗಳ ಸ್ವೀಕೃತಿ | ಯೋಜನಾ ಇಲಾಖೆಯು ಅಂತಿಮ ಯೋಜನಾ ಹಂಚಿಕೆಯನ್ನು ತಿಳಿಸಿದ ಒಂದು ವಾರದೊಳಗಾಗಿ |

## V ಆರ್ಥಿಕ ಇಲಾಖೆಯಿಂದ ಆಯವ್ಯಯ ಅಂದಾಜುಗಳನ್ನು ಅಂತಿಮಗೊಳಿಸುವಿಕೆ

| | | |
|---|---|---|
| i) | 2009-10ರ ವಾಸ್ತವಿಕಗಳನ್ನು ದಾಖಲಿಸುವುದು | 23ನೇ ನವೆಂಬರ್ 2010 |
| ii) | ಪರಿಶಿಷ್ಟ 'ಬಿ' ನಲ್ಲಿನ ಅಂದಾಜುಗಳ ಪರಿಶೀಲನೆ ಮತ್ತು ಅಂತಿಮಗೊಳಿಸುವಿಕೆ | 24ನೇ ಡಿಸೆಂಬರ್ 2010 |
| iii) | ಯೋಜನೇತರ ಮತ್ತು ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆಗಳ (ಪರಿಶಿಷ್ಟಗಳೊಂದಿಗೆ) ಅಂದಾಜುಗಳ ಪರಿಶೀಲನೆ ಮತ್ತು ಅಂತಿಮಗೊಳಿಸುವಿಕೆ | 31ನೇ ಡಿಸೆಂಬರ್ 2010 |
| iv) | ಯೋಜನೆಯ ಪರಿಷ್ಕೃತ ಅಂದಾಜುಗಳ ಮತ್ತು ಪ್ರಾಸಂಗಿಕ ಆಯವ್ಯಯ ಅಂದಾಜುಗಳ ಅಂತಿಮಗೊಳಿಸುವಿಕೆ | 31ನೇ ಡಿಸೆಂಬರ್ 2010 |
| v) | 2011-12ರ ಆಯವ್ಯಯ ಶೀರ್ಷಿಕೆಗಳ ಅಂತಿಮ ಯೋಜನಾ ರೂಪರೇಷೆ ಆರ್ಥಿಕ ಇಲಾಖೆಯಿಂದ ಅಂತಿಮಗೊಳಿಸುವುದು | ಅಂದಾಜು ಮಾಡುವ ಅಧಿಕಾರಿಗಳಿಂದ ಯೋಜನಾ ಅಂದಾಜುಗಳನ್ನು ಸ್ವೀಕರಿಸಿದ ಕೂಡಲೇ |
| vi) | ರಾಜಸ್ವ ಅಂದಾಜುಗಳನ್ನು ಅಂತಿಮಗೊಳಿಸುವುದು | 10ನೇ ಜನವರಿ 2011 |
| vii) | ಅನುದಾನಗಳ ಆಧಾರದ ಮೇಲೆ ಅಂದಾಜುಗಳ ತಯಾರಿಕೆ ಮತ್ತು ಪ್ರಧಾನ ಶೀರ್ಷಿಕೆಯ ಸಂಕ್ಷಿಪ್ತ ಪಟ್ಟಿ, ಅರ್ಥೋಪಾಯಗಳು, ಆಯವ್ಯಯ ಜ್ಞಾಪನಾಪತ್ರ, ಇತ್ಯಾದಿಗಳನ್ನು ತಯಾರಿಸುವುದು | 15ನೇ ಜನವರಿ 2011 |

**ಅನುಬಂಧ – I**

**ಸಾಮಾನ್ಯ ಉದ್ದೇಶ ಶೀರ್ಷಿಕೆಗಳು**

| ಕ್ರಮ ಸಂಖ್ಯೆ | ವಿವರಣೆ | ಉದ್ದೇಶ ಶೀರ್ಷಿಕೆ |
|---|---|---|
| 1. | ಸಂಚಿತ ವೇತನ | 001 |
| 2. | ಅಧಿಕಾರಿಗಳ ವೇತನ | 002 |
| 3. | ಸಿಬ್ಬಂದಿ ವೇತನ | 003 |
| 4. | ತಾತ್ಕಾಲಿಕ ಪರಿಹಾರ | 004 |
| 5. | ತುಟ್ಟಿ ಭತ್ಯೆ | 011 |
| 6. | ಇತರ ಭತ್ಯೆಗಳು | 014 |
| 7. | ಪೂರಕ ವೆಚ್ಚಗಳು | 015 |
| 8. | ವೈದ್ಯಕೀಯ ಭತ್ಯೆ | 020 |
| 9. | ವೈದ್ಯಕೀಯ ವೆಚ್ಚದ ಮರುಪಾವತಿ | 021 |
| 10. | ಪ್ರಯಾಣ ವೆಚ್ಚಗಳು | 041 |
| 11. | ಸಾಮಾನ್ಯ ವೆಚ್ಚಗಳು | 051 |
| 12. | ದೂರವಾಣಿ ವೆಚ್ಚಗಳು | 052 |
| 13. | ಪೀಠೋಪಕರಣಗಳ ಖರೀದಿ/ ಜೋಡಣೆ | 053 |
| 14. | ಇತರೆ ವೆಚ್ಚಗಳು | 059 |
| 15. | ಕಟ್ಟಡ ವೆಚ್ಚಗಳು | 071 |
| 16. | ಹಣಕಾಸು ಸಹಾಯ / ಪರಿಹಾರ | 100 |
| 17. | ಸಹಾಯಾನುದಾನ | 101 |
| 18. | ಕೊಡುಗೆಗಳು | 104 |
| 19. | ಸಹಾಯಧನಗಳು | 106 |
| 20. | ವಿದ್ಯಾರ್ಥಿ ವೇತನಗಳು ಮತ್ತು ಪ್ರೋತ್ಸಾಹಕಗಳು | 117 |
| 21. | ಆಧುನೀಕರಣ | 125 |
| 22. | ಬಂಡವಾಳ ವೆಚ್ಚಗಳು | 132 |
| 23. | ವಿಶೇಷ ಅಭಿವೃದ್ಧಿ ಯೋಜನೆ | 133 |
| 24. | ಪ್ರಧಾನ ಕಾಮಗಾರಿ | 139 |
| 25. | ಸಣ್ಣ ಕಾಮಗಾರಿಗಳು | 140 |
| 26. | ನಿವೇಶನ ಮತ್ತು ಕಟ್ಟಡಗಳು | 147 |
| 27. | ರಸ್ತೆಗಳು | 172 |
| 28. | ಸೇತುವೆಗಳು | 173 |
| 29. | ಯಂತ್ರ ಮತ್ತು ಸಾಧನ ಸಾಮಗ್ರಿ | 180 |
| 30. | ದುರಸ್ತಿಗಳು ಮತ್ತು ವಾಹನಗಳು | 182 |
| 31. | ಸಾರಿಗೆ ವೆಚ್ಚಗಳು | 195 |
| 32. | ನಿರ್ವಹಣೆ | 200 |

| ಕ್ರಮ ಸಂಖ್ಯೆ | ವಿವರಣೆ | ಉದ್ದೇಶ ಶೀರ್ಷಿಕೆ |
|---|---|---|
| 33. | ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯಾನುದಾನ | 201 |
| 34. | ಬಂಡವಾಳ ಹೂಡಿಕೆ | 211 |
| 35. | ಸಾಮಗ್ರಿಗಳು ಮತ್ತು ಸರಬರಾಜುಗಳು | 221 |
| 36. | ಔಷಧಗಳು ಮತ್ತು ರಾಸಾಯನಿಕಗಳು | 222 |
| 37. | ಹೊಸ ಸರಬರಾಜುಗಳು | 225 |
| 38. | ಆಸ್ಪತ್ರೆ ಉಪ ಸಾಧನಗಳು | 230 |
| 39. | ಪಥ್ಯಾಹಾರ ವೆಚ್ಚಗಳು | 234 |
| 40. | ಋಣ ಸೇವೆ ವೆಚ್ಚಗಳು | 240 |
| 41. | ಬಂಡವಾಳ ಮೇಲಣ ಬಡ್ಡಿ | 243 |
| 42. | ಪಿಂಚಣಿ ವೆಚ್ಚಗಳು | 250 |
| 43. | ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು | 251 |
| 44. | ಆಂತರಿಕ ಲೆಕ್ಕ ವರ್ಗಾವಣೆ | 261 |
| 45. | ಸವಕಳಿ | 271 |
| 46. | ಅಮಾನತ್ತುಗಳು | 291 |
| 47. | ದಾಸ್ತಾನು ಖರ್ಚುಗಳು | 292 |
| 48. | ಎಂ.ಪಿ.ಡಬ್ಲ್ಯೂ.ಎ. ಖರ್ಚುಗಳು | 293 |
| 49. | ದಾಸ್ತಾನು ಜಮೆಗಳು | 294 |
| 50. | ಎಂ.ಪಿ.ಡಬ್ಲ್ಯೂ.ಎ. ಜಮೆಗಳು | 295 |
| 51. | ದಾಸ್ತಾನು | 296 |
| 52. | ಇತರೆ ಕಾಮಗಾರಿ ಮುಂಗಡಗಳು | 297 |
| 53. | ಬಹುಮಾನ ಧನ | 299 |
| 54. | ಜಿಲ್ಲಾ ಪಂಚಾಯತ್‌ಗಳಿಗೆ ಇಡಿಗಂಟು | 300 |
| 55. | ವಜಾ ವಾಪಸಾತಿ | 364 |
| 56. | ನಿರ್ಮಾಣಗಳು | 386 |
| 57. | ಮುಂಗಡಗಳು | 393 |
| 58. | ಸಾಲಗಳು | 394 |
| 59. | ಸಾರ್ವಜನಿಕ ಉದ್ದಿಮೆಗಳಿಗೆ ಸಾಲಗಳು | 395 |
| 60. | ಬೆಂಗಳೂರು (ನಗರ) | 401 |
| 61. | ಬೆಂಗಳೂರು (ಗ್ರಾಮಾಂತರ) | 402 |
| 62. | ಚಿತ್ರದುರ್ಗ | 403 |
| 63. | ಕೋಲಾರ | 404 |
| 64. | ಶಿವಮೊಗ್ಗ | 405 |
| 65. | ತುಮಕೂರು | 406 |
| 66. | ಮೈಸೂರು | 407 |

| ಕ್ರಮ ಸಂಖ್ಯೆ | ವಿವರಣೆ | ಉದ್ದೇಶ ಶೀರ್ಷಿಕೆ |
|---|---|---|
| 67. | ಚಿಕ್ಕಮಗಳೂರು | 408 |
| 68. | ದಕ್ಷಿಣ ಕನ್ನಡ | 409 |
| 69. | ಹಾಸನ | 410 |
| 70. | ಕೊಡಗು | 411 |
| 71. | ಮಂಡ್ಯ | 412 |
| 72. | ಬೆಳಗಾವಿ | 413 |
| 73. | ವಿಜಾಪುರ | 414 |
| 74. | ಧಾರವಾಡ | 415 |
| 75. | ಉತ್ತರ ಕನ್ನಡ | 416 |
| 76. | ಗುಲ್ಬರ್ಗಾ | 417 |
| 77. | ಬಳ್ಳಾರಿ | 418 |
| 78. | ಬೀದರ್ | 419 |
| 79. | ರಾಯಚೂರು | 420 |
| 80. | ವಿಶೇಷ ಘಟಕ ಯೋಜನೆ | 422 |
| 81. | ಗಿರಿಜನ ಉಪ ಯೋಜನೆ | 423 |
| 82. | ಪರೀಕ್ಷಾ ವೆಚ್ಚಗಳು | 433 |
| 83. | ನಬಾರ್ಡ್ ಕಾಮಗಾರಿಗಳು | 436 |
| 84. | ವಜಾ ವಿಶೇಷ ಘಟಕ ಯೋಜನೆ ಒಟ್ಟುಗೂಡಿಸುವಿಕೆ | 442 |
| 85. | ವಜಾ ಗಿರಿಜನ ಉಪ ಯೋಜನೆ ಒಟ್ಟುಗೂಡಿಸುವಿಕೆ | 443 |
| 86. | ದಾವಣಗೆರೆ | 451 |
| 87. | ರಾಮನಗರ | 452 |
| 88. | ಚಿಕ್ಕಬಳ್ಳಾಪುರ | 453 |
| 89. | ಚಾಮರಾಜನಗರ | 456 |
| 90. | ಉಡುಪಿ | 457 |
| 91. | ಬಾಗಲಕೋಟೆ | 461 |
| 92. | ಗದಗ | 462 |
| 93. | ಹಾವೇರಿ | 463 |
| 94. | ಕೊಪ್ಪಳ | 466 |
| 95. | ಯಾದಗಿರಿ | 421 |

ಟಿಪ್ಪಣಿ

2003-04ನೇ ಸಾಲಿನಲ್ಲಿ ವೆಚ್ಚಗಳ ವರ್ಗೀಕರಣವನ್ನು ಸರಳೀಕರಣಗೊಳಿಸಲು ಮೊದಲಿದ್ದ ಉದ್ದೇಶ ಶೀರ್ಷಿಕೆಗಳನ್ನು ವಿಲೀನಗೊಳಿಸಲಾಗಿದೆ. 2011-12ನೇ ಸಾಲಿಗಾಗಿ ಅಂಕಣ 3 ರಲ್ಲಿರುವ ಉದ್ದೇಶ ಶೀರ್ಷಿಕೆಗಳು ಮಾತ್ರ ಜಾರಿಯಲ್ಲಿರುತ್ತವೆ. ಇಲಾಖೆಗಳು ಈ ಉದ್ದೇಶ ಶೀರ್ಷಿಕೆಗಳ ಅಡಿಯಲ್ಲೇ ಆಯವ್ಯಯ ಅವಕಾಶ ತೋರಿಸತಕ್ಕದ್ದು. ಅಂಕಣ 1 ರಲ್ಲಿರುವ ಉದ್ದೇಶ ಶೀರ್ಷಿಕೆಗಳಡಿ ಬೇಕಾಗಿರುವ ಅಂದಾಜುಗಳನ್ನು ಸರಿಯಾಗಿ ಅಂದಾಜು ಮಾಡಿ, ತದನಂತರ ಅಂಕಣ 3ರಲ್ಲಿರುವ ಉದ್ದೇಶ ಶೀರ್ಷಿಕೆಗಳಡಿ ಸೇರಿಸಿ ಅಂದಾಜುಗಳ ಅವಕಾಶ ಕಲ್ಪಿಸಲು ಗಮನ ನೀಡತಕ್ಕದ್ದು. ಇದು ಸಂಬಂಧಪಟ್ಟ ಆಯವ್ಯಯ ಅಂದಾಜು ತಯಾರಿಸುವ ಅಧಿಕಾರಿಗಳ ಆಂತರಿಕ ಪ್ರಕ್ರಿಯೆ ಮಾತ್ರವಾಗಿರುತ್ತದೆ.

| ಉದ್ದೇಶ ಶೀರ್ಷಿಕೆ ಮತ್ತು ವಿವರ | | ವಿಲೀನದ ನಂತರ ಉದ್ದೇಶ ಶೀರ್ಷಿಕೆ ಮತ್ತು ವಿವರ | |
|---|---|---|---|
| 1 | 2 | 3 | 4 |
| 001 | ಮಂತ್ರಿಗಳು, ಸಭಾಧ್ಯಕ್ಷರುಗಳು, ಅಧಿಕಾರೇತರ ಸದಸ್ಯರುಗಳು ಇತ್ಯಾದಿಯವರ ಸಂಚಿತ ವೇತನ | 001 | ಸಂಚಿತ ವೇತನ |
| 002 | ಅಧಿಕಾರಿಗಳ ವೇತನ | 002 | ಅಧಿಕಾರಿಗಳ ವೇತನ |
| 003 | ಸಿಬ್ಬಂದಿ ವೇತನ | 003 | ಸಿಬ್ಬಂದಿ ವೇತನ |
| 004 | ತಾತ್ಕಾಲಿಕ ಪರಿಹಾರ | 004 | ತಾತ್ಕಾಲಿಕ ಪರಿಹಾರ |
| 011 | ತುಟ್ಟಿ ಭತ್ಯೆ | 011 | ತುಟ್ಟಿ ಭತ್ಯೆ |
| 014 | ಇತರೆ ಭತ್ಯೆಗಳು | 014 | ಇತರೆ ಭತ್ಯೆಗಳು |
| 031 | ಮಜೂರಿ | | |
| 063 | ಸಂಭಾವನೆ | 015 | ಪೂರಕ ವೆಚ್ಚಗಳು |
| 316 | ಪಾರಿತೋಷಕ | | |
| 317 | ತರಬೇತಿ | | |
| 020 | ವೈದ್ಯಕೀಯ ಭತ್ಯೆ | 020 | ವೈದ್ಯಕೀಯ ಭತ್ಯೆ |
| 021 | ವೈದ್ಯಕೀಯ ವೆಚ್ಚಗಳ ಮರುಪಾವತಿ | 021 | ವೈದ್ಯಕೀಯ ವೆಚ್ಚಗಳ ಮರುಪಾವತಿ |
| 041 | ಪ್ರಯಾಣ ವೆಚ್ಚಗಳು | 041 | ಪ್ರಯಾಣ ವೆಚ್ಚಗಳು |
| 050 | ಕಛೇರಿ ವೆಚ್ಚಗಳು | | |
| 060 | ಇತರೆ ವೆಚ್ಚಗಳು | | |
| 075 | ಗ್ರಂಥಾಲಯಗಳು ಮತ್ತು ನಿಯತ ಕಾಲಿಕೆಗಳು | | |
| 080 | ಮುದ್ರಣ, ಪ್ರಕಟಣೆ ಮತ್ತು ಜಾಹೀರಾತು | | |
| 120 | ಅತಿಥ್ಯ ವೆಚ್ಚಗಳು | | |
| 122 | ಮನರಂಜನೆ ವೆಚ್ಚಗಳು | 051 | ಸಾಮಾನ್ಯ ವೆಚ್ಚಗಳು |
| 171 | ಗಣಕಯಂತ್ರ ಸೌಲಭ್ಯಗಳು | | |
| 354 | ದೂರವಾಣಿ ವೆಚ್ಚಗಳು – ಮಂತ್ರಿಗಳ ಪರಿಷತ್ತು | 052 | ದೂರವಾಣಿ ವೆಚ್ಚಗಳು |
| 052 | ದೂರವಾಣಿ ವೆಚ್ಚಗಳು | | |
| 053 | ಪೀಠೋಪಕರಣ ಖರೀದಿ / ಜೋಡಣೆ | 053 | ಪೀಠೋಪಕರಣಗಳ ಖರೀದಿ / ಜೋಡಣೆ |

| | ಉದ್ದೇಶ ಶೀರ್ಷಿಕೆ ಮತ್ತು ವಿವರ | ವಿಲೀನದ ನಂತರ ಉದ್ದೇಶ ಶೀರ್ಷಿಕೆ ಮತ್ತು ವಿವರ | |
|---|---|---|---|
| 059 | ಇತರೆ ವೆಚ್ಚಗಳು | 059 | ಇತರೆ ವೆಚ್ಚಗಳು |
| 130 | ಹರಾಜು ಪ್ರಕಟಣೆ ವೆಚ್ಚಗಳು | | |
| 298 | ಬಹುಮಾನ ಧನ | | |
| 308 | ಆಹಾರ ಮತ್ತು ಮೇವು | | |
| 424 | ಗ್ರಾಮೀಣ ನೀರು ಸರಬರಾಜು ಯೋಜನೆ | | |
| 425 | ನಗರ ನೀರು ಸರಬರಾಜು ಯೋಜನೆ | | |
| 500 | ಇಡಿಗಂಟು | | |
| 058 | ವಿದ್ಯುಚ್ಛಕ್ತಿ ಮತ್ತು ನೀರಿನ ಶುಲ್ಕಗಳು | 071 | ಕಟ್ಟಡ ವೆಚ್ಚಗಳು |
| 072 | ಬಾಡಿಗೆ, ದರ ಮತ್ತು ತೆರಿಗೆಗಳು | | |
| 100 | ಹಣಕಾಸು ಸಹಾಯ / ಪರಿಹಾರ | 100 | ಹಣಕಾಸು ಸಹಾಯ / ಪರಿಹಾರ |
| 101 | ಸಹಾಯಾನುದಾನ | 101 | ಸಹಾಯಾನುದಾನ |
| 104 | ಕೊಡುಗೆ | 104 | ಕೊಡುಗೆ |
| 106 | ಸಹಾಯ ಧನ | 106 | ಸಹಾಯ ಧನ |
| 111 | ವಿದ್ಯಾರ್ಥಿ ವೇತನ ಮತ್ತು ಶಿಷ್ಯ ವೇತನ | | |
| 131 | ರಹಸ್ಯ ಸೇವೆಗಳ ವೆಚ್ಚ | | |
| 095 | ಪಠ್ಯ ಪುಸ್ತಕಗಳು | 117 | ವಿದ್ಯಾರ್ಥಿವೇತನಗಳು ಮತ್ತು ಉತ್ತೇಜನಗಳು |
| 310 | ಏಜೆಂಟ್‌ಗಳಿಗೆ ನೀಡುವ ದಳ್ಳಾಳಿ | | |
| 125 | ಆಧುನೀಕರಣ | 125 | ಆಧುನೀಕರಣ |
| 137 | ಸಮೀಕ್ಷೆ ಮತ್ತು ತನಿಖೆಗಳು | | |
| 145 | ಭೂಸ್ವಾಧೀನ | | |
| 154 | ವಿಸ್ತರಣೆಗಳು ಮತ್ತು ಸುಧಾರಣೆಗಳು | | |
| 165 | ಜಲಾಶಯಗಳು | 132 | ಬಂಡವಾಳ ವೆಚ್ಚಗಳು |
| 166 | ಅಣೆಕಟ್ಟು ಮತ್ತು ಸಂಬಂಧಿಸಿದ ಕೆಲಸಗಳು | | |
| 167 | ಕಾಲುವೆಗಳು ಮತ್ತು ಶಾಖೆಗಳು–ಸಾಮಾನ್ಯ | | |
| 169 | ನದೀ ಶಾಖೆಗಳು–ಸಾಮಾನ್ಯ | | |
| 171 | ನೀರು ಮಾರ್ಗಗಳು | | |
| 459 | ಬಂಡವಾಳ ವೆಚ್ಚ | | |
| 381 | ಸಾಮಾನ್ಯ | | |
| 133 | ವಿಶೇಷ ಅಭಿವೃದ್ಧಿ ಯೋಜನೆ | 133 | ವಿಶೇಷ ಅಭಿವೃದ್ಧಿ ಯೋಜನೆ |
| 139 | ಭಾರಿ ಕಾಮಗಾರಿಗಳು | 139 | ಭಾರಿ ಕಾಮಗಾರಿಗಳು |

| | ಉದ್ದೇಶ ಶೀರ್ಷಿಕೆ ಮತ್ತು ವಿವರ | | ವಿಲೀನದ ನಂತರ ಉದ್ದೇಶ ಶೀರ್ಷಿಕೆ ಮತ್ತು ವಿವರ |
|---|---|---|---|
| 140 | ಸಣ್ಣ ಕಾಮಗಾರಿಗಳು | 140 | ಸಣ್ಣ ಕಾಮಗಾರಿಗಳು |
| 147<br>172<br>173<br>180<br>182 | ನಿವೇಶನ ಮತ್ತು ಕಟ್ಟಡಗಳು<br>ರಸ್ತೆಗಳು<br>ಸೇತುವೆಗಳು<br>ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು<br>ದುರಸ್ತಿಗಳು ಮತ್ತು ವಾಹನಗಳು | 147<br>172<br>173<br>180<br>182 | ನಿವೇಶನ ಮತ್ತು ಕಟ್ಟಡಗಳು<br>ರಸ್ತೆಗಳು<br>ಸೇತುವೆಗಳು<br>ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು<br>ದುರಸ್ತಿಗಳು ಮತ್ತು ವಾಹನಗಳು |
| 191<br>192<br>193 | ಇಂಧನ ಮತ್ತು ತೈಲ ವೆಚ್ಚಗಳು<br>ಲಘು ವಾಹನಗಳ ದುರಸ್ತಿ<br>ಹೊಸ ವಾಹನಗಳ ಖರೀದಿ | 195 | ಸಾರಿಗೆ ವೆಚ್ಚಗಳು |
| 140<br>150 | ಲಘು ಕಾಮಗಾರಿ<br>ದುರಸ್ತಿ, ವಿಶೇಷ ದುರಸ್ತಿ ಮತ್ತು ನವೀಕರಣ | 200 | ನಿರ್ವಹಣೆ |
| 201<br>211 | ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯಾನುದಾನ<br>ಬಂಡವಾಳ ಹೂಡಿಕೆ | 201<br>211 | ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯಾನುದಾನ<br>ಬಂಡವಾಳ ಹೂಡಿಕೆ |
| 161<br>229 | ಅಲಂಕರಣಗಳು<br>ಸಾಧನ ಸಾಮಗ್ರಿಗಳು ಮತ್ತು ವಸ್ತ್ರಗಳು | 221 | ಸಾಮಗ್ರಿಗಳು ಮತ್ತು ಸರಬರಾಜುಗಳು |
| 222<br>225 | ಔಷಧಗಳು ಮತ್ತು ರಾಸಾಯನಿಕಗಳು<br>ಹೊಸ ಸರಬರಾಜುಗಳು | 222<br>225 | ಔಷಧಗಳು ಮತ್ತು ರಾಸಾಯನಿಕಗಳು<br>ಹೊಸ ಸರಬರಾಜುಗಳು |
| 230<br>234 | ಆಸ್ಪತ್ರೆ ಉಪ ಸಾಧನಗಳು<br>ಪಥ್ಯಾಹಾರ ವೆಚ್ಚಗಳು | 230<br>234 | ಆಸ್ಪತ್ರೆ ಉಪ ಸಾಧನಗಳು<br>ಪಥ್ಯಾಹಾರ ವೆಚ್ಚಗಳು |
| 127<br>128<br>129<br>241 | ಆಂತರಿಕ ಋಣ ಮರು ಸಂದಾಯಗಳು<br>ಕೇಂದ್ರ ಋಣ ಮರು ಸಂದಾಯಗಳು<br>ಮರು ಪಾವತಿಗಾಗಿ ಸಹಾಯ<br>ಬಡ್ಡಿ | 240 | ಋಣ ಸೇವೆ |
| 243<br>250 | ಬಂಡವಾಳ ಮೇಲಣ ಬಡ್ಡಿ<br>ಪಿಂಚಣಿ ವೆಚ್ಚಗಳು | 243<br>250 | ಬಂಡವಾಳ ಮೇಲಣ ಬಡ್ಡಿ<br>ಪಿಂಚಣಿ ವೆಚ್ಚಗಳು |
| 126<br>251<br>252<br>253 | ಅಂತಿಮ ರಜಾ ಸೌಲಭ್ಯಗಳು<br>ಪಿಂಚಣಿಗಳು<br>ನಿವೃತ್ತಿ ವೇತನದ ಪರಿವರ್ತಿತ ಮೌಲ್ಯ<br>ಅನುಕಂಪ ಭತ್ಯೆ | 251 | ಪಿಂಚಣಿ ಮತ್ತು ನಿವೃತ್ತಿ ವೇತನ ಸೌಲಭ್ಯಗಳು |

| | ಉದ್ದೇಶ ಶೀರ್ಷಿಕೆ ಮತ್ತು ವಿವರ | | ವಿಲೀನದ ನಂತರ ಉದ್ದೇಶ ಶೀರ್ಷಿಕೆ ಮತ್ತು ವಿವರ |
|---|---|---|---|
| 254 | ಮರಣ ಹಾಗೂ ನಿವೃತ್ತಿ ಉಪದಾನ | 251 | ಪಿಂಚಣಿ ಮತ್ತು ನಿವೃತ್ತಿ ವೇತನ ಸೌಲಭ್ಯಗಳು |
| 028<br>029<br>030<br>369<br>378 | 2059 ಲೋಕೋಪಯೋಗಿಯಿಂದ ಇ.ಟಿ.ಪಿ. ವೆಚ್ಚಗಳು<br>2701 ಭಾರಿ ಮತ್ತು ಮಧ್ಯಮ ನೀರಾವರಿಯಿಂದ ಇ.ಟಿ.ಪಿ. ವೆಚ್ಚಗಳು<br>2702 ಸಣ್ಣ ನೀರಾವರಿಯಿಂದ ಇ.ಟಿ.ಪಿ. ವೆಚ್ಚಗಳು<br>ಸರ್ಕಾರಕ್ಕೆ ಅಥವಾ ಇಲಾಖೆಗಳಿಗೆ ವರ್ಗಾವಣೆಗೊಂಡ ವಜಾ ಮೊತ್ತ<br>4701 ಭಾರಿ ಮತ್ತು ನೀರಾವರಿ ಮೇಲಣ ಬಂಡವಾಳ ವೆಚ್ಚಕ್ಕೆ ವರ್ಗಾವಣೆಗೊಂಡ ವಜಾ ಮೊತ್ತ | 261 | ಆಂತರಿಕ ಲೆಕ್ಕ ವರ್ಗಾವಣೆಗಳು |
| 271 | ಸವಕಳಿ | 271 | ಸವಕಳಿ |
| 291 | ಅಮಾನತ್ತುಗಳು | 291 | ಅಮಾನತ್ತುಗಳು |
| 292 | ದಾಸ್ತಾನು ಖರ್ಚುಗಳು | 292 | ದಾಸ್ತಾನು ಖರ್ಚುಗಳು |
| 293 | ಎಂ.ಪಿ.ಡಬ್ಲ್ಯೂ.ಎ ಖರ್ಚುಗಳು | 293 | ಎಂ.ಪಿ.ಡಬ್ಲ್ಯೂ.ಎ ಖರ್ಚುಗಳು |
| 294 | ದಾಸ್ತಾನು ಜಮೆಗಳು | 294 | ದಾಸ್ತಾನು ಜಮೆಗಳು |
| 295 | ಎಂಪಿಡಬ್ಲ್ಯೂಎ ಜಮೆಗಳು | 295 | ಎಂಪಿಡಬ್ಲ್ಯೂಎ ಜಮೆಗಳು |
| 296 | ದಾಸ್ತಾನು | 296 | ದಾಸ್ತಾನು |
| 297 | ಇತರೆ ಕಾಮಗಾರಿ ಮುಂಗಡಗಳು | 297 | ಇತರೆ ಕಾಮಗಾರಿ ಮುಂಗಡಗಳು |
| 299 | ಬಹುಮಾನ ಧನ | 299 | ಬಹುಮಾನ ಧನ |
| 300 | ಜಿಲ್ಲಾ ಪಂಚಾಯತ್‌ಗಳಿಗೆ ಇಡಿಗಂಟು | 300 | ಜಿಲ್ಲಾ ಪಂಚಾಯತ್‌ಗಳಿಗೆ ಇಡಿಗಂಟು |
| 364 | ವಜಾ–ವಾಪಸಾತಿಗಳು | 364 | ವಜಾ–ವಾಪಸಾತಿಗಳು |
| 386 | ನಿರ್ಮಾಣ | 386 | ನಿರ್ಮಾಣ |
| 393 | ಮುಂಗಡಗಳು | 393 | ಮುಂಗಡಗಳು |
| 394 | ಸಾಲಗಳು | 394 | ಸಾಲಗಳು |
| 395 | ಸಾರ್ವಜನಿಕ ಉದ್ದಿಮೆಗಳಿಗೆ ಸಾಲಗಳು | 395 | ಸಾರ್ವಜನಿಕ ಉದ್ದಿಮೆಗಳಿಗೆ ಸಾಲಗಳು |
| 401 | ಬೆಂಗಳೂರು (ನಗರ) | 401 | ಬೆಂಗಳೂರು (ನಗರ) |
| 402 | ಬೆಂಗಳೂರು (ಗ್ರಾಮಾಂತರ) | 402 | ಬೆಂಗಳೂರು (ಗ್ರಾಮಾಂತರ) |
| 403 | ಚಿತ್ರದುರ್ಗ | 403 | ಚಿತ್ರದುರ್ಗ |

| | ಉದ್ದೇಶ ಲೆಕ್ಕ ಶೀರ್ಷಿಕೆ ಮತ್ತು ವಿವರ | | ವಿಲೀನದ ನಂತರ ಉದ್ದೇಶ ಶೀರ್ಷಿಕೆ ಮತ್ತು ವಿವರ |
|---|---|---|---|
| 404 | ಕೋಲಾರ | 404 | ಕೋಲಾರ |
| 405 | ಶಿವಮೊಗ್ಗ | 405 | ಶಿವಮೊಗ್ಗ |
| 406 | ತುಮಕೂರು | 406 | ತುಮಕೂರು |
| 407 | ಮೈಸೂರು | 407 | ಮೈಸೂರು |
| 408 | ಚಿಕ್ಕಮಗಳೂರು | 408 | ಚಿಕ್ಕಮಗಳೂರು |
| 409 | ದಕ್ಷಿಣ ಕನ್ನಡ | 409 | ದಕ್ಷಿಣ ಕನ್ನಡ |
| 410 | ಹಾಸನ | 410 | ಹಾಸನ |
| 411 | ಕೊಡಗು | 411 | ಕೊಡಗು |
| 412 | ಮಂಡ್ಯ | 412 | ಮಂಡ್ಯ |
| 413 | ಬೆಳಗಾವಿ | 413 | ಬೆಳಗಾವಿ |
| 414 | ವಿಜಾಪುರ | 414 | ವಿಜಾಪುರ |
| 415 | ಧಾರವಾಡ | 415 | ಧಾರವಾಡ |
| 416 | ಉತ್ತರ ಕನ್ನಡ | 416 | ಉತ್ತರ ಕನ್ನಡ |
| 417 | ಗುಲ್ಬರ್ಗಾ | 417 | ಗುಲ್ಬರ್ಗಾ |
| 418 | ಬಳ್ಳಾರಿ | 418 | ಬಳ್ಳಾರಿ |
| 419 | ಬೀದರ್ | 419 | ಬೀದರ್ |
| 420 | ರಾಯಚೂರು | 420 | ರಾಯಚೂರು |
| 422 | ವಿಶೇಷ ಘಟಕ ಯೋಜನೆ | 422 | ವಿಶೇಷ ಘಟಕ ಯೋಜನೆ |
| 423 | ಗಿರಿಜನ ಉಪ ಯೋಜನೆ | 423 | ಗಿರಿಜನ ಉಪ ಯೋಜನೆ |
| 432 | ಪರೀಕ್ಷಾ ವೆಚ್ಚಗಳು | 432 | ಪರೀಕ್ಷಾ ವೆಚ್ಚಗಳು |
| 436 | ನಬಾರ್ಡ್ ಕಾಮಗಾರಿಗಳು | 436 | ನಬಾರ್ಡ್ ಕಾಮಗಾರಿಗಳು |
| 442 | ವಜಾ ವಿಶೇಷ ಘಟಕ ಯೋಜನೆ ಒಟ್ಟುಗೂಡಿಸುವಿಕೆ | 442 | ವಜಾ ವಿಶೇಷ ಘಟಕ ಯೋಜನೆ ಒಟ್ಟುಗೂಡಿಸುವಿಕೆ |
| 443 | ವಜಾ ಗಿರಿಜನ ಉಪ ಯೋಜನೆ ಒಟ್ಟುಗೂಡಿಸುವಿಕೆ | 443 | ವಜಾ ಗಿರಿಜನ ಉಪ ಯೋಜನೆ ಒಟ್ಟುಗೂಡಿಸುವಿಕೆ |
| 451 | ದಾವಣಗೆರೆ | 451 | ದಾವಣಗೆರೆ |
| 452 | ರಾಮನಗರ | 452 | ರಾಮನಗರ |
| 453 | ಚಿಕ್ಕಬಳ್ಳಾಪುರ | 453 | ಚಿಕ್ಕಬಳ್ಳಾಪುರ |
| 456 | ಚಾಮರಾಜನಗರ | 456 | ಚಾಮರಾಜನಗರ |

| | ಉದ್ದೇಶ ಲೆಕ್ಕ ಶೀರ್ಷಿಕೆ ಮತ್ತು ವಿವರ | | ವಿಲೀನದ ನಂತರ ಉದ್ದೇಶ ಶೀರ್ಷಿಕೆ ಮತ್ತು ವಿವರ |
|---|---|---|---|
| 457 | ಉಡುಪಿ | 457 | ಉಡುಪಿ |
| 461 | ಬಾಗಲಕೋಟೆ | 461 | ಬಾಗಲಕೋಟೆ |
| 462 | ಗದಗ | 462 | ಗದಗ |
| 463 | ಹಾವೇರಿ | 463 | ಹಾವೇರಿ |
| 466 | ಕೊಪ್ಪಳ | 466 | ಕೊಪ್ಪಳ |
| 421 | ಯಾದಗಿರಿ | 421 | ಯಾದಗಿರಿ |

# ಅನುಬಂಧ- II

ಇಲಾಖೆ ..............................

| ಕ್ರ. ಸಂ. | ಅಧಿಕಾರಿಗಳ : ಸಿಬ್ಬಂದಿಯ ಹೆಸರು | ನಿವೃತ್ತಿ ಹೊಂದುವ ದಿನಾಂಕ | ಮೂಲ ವೇತನ | ತುಟ್ಟಿ ಭತ್ಯೆ | ಹಕ್ಕಿನಲ್ಲಿರುವ ರಜೆಯ ಆಧಾರದ ಮೇಲೆ ಅಂತಿಮ ರಜಾ ಸೌಲಭ್ಯಗಳು |
|---|---|---|---|---|---|
| | | | | | |

GOVERNMENT OF KARNATAKA

**FINANCE DEPARTMENT**

# OFFICIAL MEMORANDUM

No. FD 14 BPE 2010, Bangalore, dated. 15th October, 2010

Subject : **Budget Estimates - 2011-12**

* * *

The following instructions are issued in connection with the preparation of the Budget Estimates for 2011-12.

2. 2011-12 is the fifth year of the 11th 5 year Plan.

3. The calendar for regulating the Budget work for 2011-12 is enclosed to this O.M. When a period of time is allowed for any item for work, the intention is to secure an even flow of work in Finance Department and thus avoid rush of work in the last stages. Estimating Officers are requested to see that **TOP PRIORITY** is given to the Budget work and that the estimates are sent as soon as they are completed without waiting for the expiry of the prescribed date. Internal Financial Advisers have been appointed in most of the Secretariat Departments. The Estimates relating to these Departments may be sent to the Internal Financial Advisers for further submission to Finance Department. In other cases, the Estimates may be sent to the Budget Compilation and Committee Section of Finance Department, addressed to Deputy Secretary to Government (B & R) Finance Department.

4. The amounts transferable to the Zilla, Taluk and Village Panchayats are shown in the budget under the relevant departmental Major Heads under the Minor head "196/197/198. A subsidiary Budget Volume called the Link document presented to the Legislature will give the scheme-wise provision for each District under Plan and Non-Plan respectively under the different Major Heads.

5. The Chief Accounts Officers of Zilla Panchayats will act as Estimating Officers for District Sector Schemes. The Chief Accounts Officer is required to send the detailed Budget estimates to the **concerned Head of Department and the IFA.** The Heads of Department in turn should scrutinise the estimates and forward them with their remarks to the Finance Department through the IFA before the due dates fixed.

